ಚಾಡಿಕೋರರ ಉಪಯುಕ್ತತೆ ಮತ್ತು ನಿರರ್ಥಕತೆ ಕುರಿತು ಒಂದು ಸಣ್ಣ ಟಿಪ್ಪಣಿ ಬರೆದ್ರು. ಅವರ ಎಲ್ಲಾ ಮಾತುಗಳನ್ನು ಒಪ್ಪಿಕೊಳ್ಳಲು ನನಗೂ ಸಾಧ್ಯವಿಲ್ಲ. ಆದರೆ, ತಮ್ಮ ಸುತ್ತಲಿನ ಚಾಡಿಕೋರರ ಮಾತನ್ನು ಮೀರಿಯೂ ವ್ಯಕ್ತಿಯೊಬ್ಬನ ಮಿತಿ ಮತ್ತು ಸಾಧ್ಯತೆಗಳನ್ನು ಗುರುತಿಸುವ ಶಕ್ತಿ ಅವರಿಗಿತ್ತು.

ಬರವಣಿಗೆ ಅಥವಾ ಮಾಡುವ ಕೆಲಸಗಳಲ್ಲಿ ಪ್ರಾಮಾಣಿಕತೆ ಇದ್ದರೆ ಅವು ಇಂದಲ್ಲ ನಾಳೆ ಗುರುತಿಸಲ್ಪಡುತ್ತವೆ ಎಂದು ನಂಬಿದವನು ನಾನು. ಒಮ್ಮೆ ಹೀಗೇ ಆಯಿತು. ವಿಮರ್ಶಕ ಜಿ.ಎಚ್. ನಾಯಕರು ನಮಗೆಲ್ಲರಿಗೂ ಅತ್ಯಂತ ಗೌರವದ ವ್ಯಕ್ತಿ. ಅವರ ಮಾತುಗಳನ್ನು ನೀವು ಕೇಳಿರಬಹುದು. ಒಂದು ಸಾಲು ಕೂಡ ಆಚೀಚೆ ಮಾಡದೆ ನಿಷ್ಠುರವಾಗಿ, ಪ್ರಾಮಾಣಿಕವಾಗಿ ಮಾತನಾಡುವ ವ್ಯಕ್ತಿ ಅವರು. ನಾನು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿ ಒಂದು ವರ್ಷವಾಗಿತ್ತು. ಮೈಸೂರಿನಲ್ಲಿ ಪುಸ್ತಕ ಬಿಡುಗಡೆ ಸಮಾರಂಭ ಒಂದಕ್ಕೆ ಹೋಗಿದ್ದೆ. ಅಲ್ಲಿ ಜಿ.ಎಚ್. ನಾಯಕರು ಮಾತನಾಡುತ್ತ, 'ನಾನು ಪುಸ್ತಕದ ಬಗ್ಗೆ ಮಾತನಾಡುವ ಮೊದಲು ನನ್ನ ಮನಸ್ಸಿನ ಮಾತೊಂದನ್ನು ಹೇಳುವೆ. ಬರಗೂರು ಅವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದದ್ದು ನನಗೆ ಅಸಮಾಧಾನ ಉಂಟು ಮಾಡಿದೆ. ಅವರು ಕಾಯಬಹುದಿತ್ತು. ಇನ್ನೂ ಚಿಕ್ಕವರು. ಅರ್ಹರಾದ ಅನೇಕ ಹಿರಿಯರು ಇದ್ದರು' ಅಂದರು. ನಾನು ಕೂಡ ಅಲ್ಲಿಯೇ ವೇದಿಕೆಯಲ್ಲಿ ಕೂತಿದ್ದೆ. ಅಂಥ ಹಿರಿಯರು ಹೀಗೆ ಹೇಳುತ್ತಾರೆಂದರೆ– ಒಳಗೇ ಕುಗ್ಗಿಹೋದೆ. ಆದರೆ, ನನಗೇ ಅಚ್ಚರಿ ಎಂಬಂತೆ ಅವರ ಮುಂದಿನ ಮಾತುಗಳು ನನ್ನನ್ನು ಭಾವುಕಗೊಳಿಸಿದವು. 'ಇದೆಲ್ಲ ಮೊದಲಿನ ಅಭಿಪ್ರಾಯವಾಗಿತ್ತು. ಆದ್ರೆ ಈಗ ನನಗನಿಸೋದೇನಂದ್ರೆ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಗೆ ಸೂಕ್ತ ವ್ಯಕ್ತಿ ಯಾರಾದ್ರೂ ಇದ್ರೆ ಅದು ಬರಗೂರರು ಮಾತ್ರ.' ಅಕಾಡೆಮಿಯಿಂದ ನಾವು ಮಾಡುತ್ತಿರುವ ಕೆಲಸಗಳನ್ನು ಅವರು ಸೂಕ್ಷ್ಮವಾಗಿ ಗಮನಿಸುತ್ತಿದ್ರು ಅಂತ ಕಾಣುತ್ತೆ. ನನಗೆ ಚಿಕ್ಕದೊಂದು ಅಪಘಾತ ಆದಾಗ ಅವರು ಗದ್ಗದಿತರಾಗಿ ಫೋನ್ ಮಾಡಿದ್ರು. ಮೈಸೂರಿನಲ್ಲಿ ಸಿಕ್ಕಾಗ, 'ನೀವೆಲ್ಲ ತುಂಬಾ ವರ್ಷ ಬದುಕಬೇಕು. ನೀವು ನಮ್ಮ ನಿಜವಾದ ಸಾಂಸ್ಕೃತಿಕ ನಾಯಕರು' ಅಂದ್ರು. ಆಗ ನಾನು ಮೂಕವಿಸ್ಮಿತನಾದೆ. ಟೀಕೆ ಮತ್ತು ಪ್ರೀತಿ ಎರಡನ್ನೂ ಸ್ವೀಕರಿಸುತ್ತ ನನ್ನ ಕೆಲಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳುತ್ತ ನಡೆದಿರುವೆ.

◆ **ಈಗ ಎಷ್ಟೋ ಸಲ ನಿಮ್ಮ ಅನುಭವ ನಿಮಗೆ ಏನನ್ನೋ ಹೇಳುತ್ತೆ, ನೀವು ರೂಪಿಸಿಕೊಂಡ ವೈಚಾರಿಕತೆ ಇನ್ನೇನೊ ಹೇಳುತ್ತೆ. ಇಂಥ ಹೊತ್ತಿನಲ್ಲಿ ಅನುಭವ ಮತ್ತು ವೈಚಾರಿಕತೆಯ ಈ ಸಂಬಂಧವನ್ನು ನಿಮ್ಮ ಕತೆ, ಕಾದಂಬರಿ, ಕಾವ್ಯಗಳಲ್ಲಿ ಹೇಗೆ ನಿರ್ವಹಿಸ್ತೀರಿ?**

ಇದು ಸೃಷ್ಟಿಕ್ರಿಯೆ ಕುರಿತ ಒಂದು ಮುಖ್ಯವಾದ ಪ್ರಶ್ನೆ. ಅನುಭವ ಮತ್ತು ವೈಚಾರಿಕತೆಗಳ ನಡುವೆ ಇರಬೇಕಾದ ಸಂಬಂಧದ ಪ್ರಶ್ನೆಯೂ ಹೌದು. ಜೀವನಾನುಭವವು ಯಾವುದೇ ಕಲಾಸೃಷ್ಟಿಯ ಮೂಲದ್ರವ್ಯ. ಈ ಮೂಲದ್ರವ್ಯವು ಮುಖಾಮುಖಿಯಾಗಬೇಕಾದ ಅಥವಾ ಅನುಸಂಧಾನಗೊಳ್ಳಬೇಕಾದ ವಿಚಾರಗಳು ನಮ್ಮೆದುರು ಇರುತ್ತವೆ; ನಮ್ಮೊಳಗೂ ಇರುತ್ತವೆ. ನಮ್ಮ ಎದುರು ಇರುವ ವಿಚಾರಗಳಿಗೆ ಮುಖಾಮುಖಿಯಾಗಿ ಅನುಭವವನ್ನು ಒರೆಗಲ್ಲಿಗೊಡ್ಡುವ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಎಷ್ಟು ಮುಖ್ಯವೊ ನಮ್ಮ ಒಳಗೆ ಇರುವ ವಿಚಾರಗಳ ಜೊತೆಗೆ ಸ್ನೇಹಾನುಸಂಧಾನವೂ ಅಷ್ಟೇ ಮುಖ್ಯ. ಎರಡೂ ಪ್ರಕ್ರಿಯೆಗಳಲ್ಲಿ ಸಂವಾದದ ಪಾತ್ರ ದೊಡ್ಡದು. ಹೊರಗನ್ನು ಒಳಗೆ ತಂದುಕೊಳ್ಳುವುದು, ಒಳಗನ್ನು ಹೊರಗೆ ತಂದು ನೋಡುವುದು – ಈ ಎರಡೂ ಪ್ರಕ್ರಿಯೆಗಳಿಂದ ಅನುಭವ ಮತ್ತು ವಿಚಾರಗಳಿಗೊಂದು ನಿರ್ದಿಷ್ಟ ವಿನ್ಯಾಸ ಲಭ್ಯವಾಗುತ್ತದೆ. ಅನುಭವ ಮತ್ತು ಅಧ್ಯಯನಗಳೊಂದಾದ ಪ್ರಕ್ರಿಯೆಯೊಳಗೆ ವೈಚಾರಿಕ ಪ್ರಕಾರವು ರೂಪುಗೊಳ್ಳುತ್ತದೆ. ಯಾವುದೇ ವಾದ(ಇಸಂ)ವನ್ನು ತೆಗೆದುಕೊಳ್ಳಿ; ಅದು ಇದ್ದಕ್ಕಿದ್ದಂತೆ ಅವತರಿಸಿರುವುದಿಲ್ಲ.